सत्यमेव जयते

# H.D. DEVE GOWDA
## Former Prime Minister of India


No:18/GOK/FPM/HDD/2026 ದಿನಾಂಕ:25.06.2026

ಮಾನ್ಯ ಮುಖ್ಯಮಂತ್ರಿ ರವರೇ,

ವಿಷಯ: ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರಚಿತವಾಗುತ್ತಿರುವ ಗ್ರೇಟರ್ ಬೆಂಗಳೂರು ಬಿಡದಿ ಸಮಗ್ರ ಉಪನಗರ ಯೋಜನೆಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿ 08 ಗ್ರಾಮಗಳಲ್ಲಿ ಹಾಗೂ ಹಾರೋಹಳ್ಳಿ ತಾಲ್ಲೂಕಿನ ಹಾರೋಹಳ್ಳಿ ಹೋಬಳಿಯ ಒಂದು ಗ್ರಾಮದಲ್ಲಿ ಭೂಸ್ವಾಧೀನ ಪಡಿಸಿಕೊಳ್ಳುತ್ತಿರುವ ಒಟ್ಟು 7481 ಎಕರೆ 21.08 ಗುಂಟೆ ಕೃಷಿ ಭೂಮಿಯನ್ನು ಕೈ ಬಿಡಲು ಒತ್ತಾಯಿಸಿ ಸ್ಥಳೀಯ ರೈತರು ನಡೆಸುತ್ತಿರುವ ನಿರಂತರ ಹೋರಾಟ, ಮತ್ತು ಬೆಂಗಳೂರು ನಗರ ನಿವಾಸಿಗಳಿಗೆ ವಸತಿ ನಿವೇಶನ ಒದಗಿಸಲು ರಾಜ್ಯ ಸರ್ಕಾರ ಶಿವರಾಮಕಾರಂತ ಲೇಔಟ್ ಮತ್ತು ನಾಡಪ್ರಭು ಕೆಂಪೇಗೌಡ ಲೇಔಟ್‌ಗಳಲ್ಲಿ ರಚಿಸಿರುವ ಸಾವಿರಾರು ನಿವೇಶನಗಳು ಹಂಚಿಕೆ ಆಗದೆ ಖಾಲಿಯಿರುವ ನಿವೇಶನಗಳು ಹಾಗೂ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್-2 (PRR-2) ಹೊಂದಿಕೊಂಡಂತೆ 6 ಬಡಾವಣೆಗಳ ರಚನೆ ಹಿನ್ನೆಲೆಯಲ್ಲಿ ರೈತರ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಬಿಡದಿ ಸಮಗ್ರ ಉಪನಗರ ಯೋಜನೆಯನ್ನು ಕೈಬಿಡಲು ಒತ್ತಾಯ.

******

ರಾಜ್ಯ ಸರ್ಕಾರ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿಯ ಬೈರಮಂಗಲ, ಬನಗಿರಿ, ಹೊಸೂರು, ಕೆ.ಜಿ.ಗೊಲ್ಲರಪಾಳ್ಯ, ಕಂಚುಗಾರನಹಳ್ಳಿ, ಅರಳಾಳುಸಂದ್ರ, ಕೆಂಪಯ್ಯನಪಾಳ್ಯ, ಮಂಡಲಹಳ್ಳಿ ಹಾಗೂ ಹಾರೋಹಳ್ಳಿ ತಾಲ್ಲೂಕಿನ ಹಾರೋಹಳ್ಳಿ ಹೋಬಳಿಯ ವಡೇರಹಳ್ಳಿ (ಭಾಗಶಃ) ಗ್ರಾಮಗಳಲ್ಲಿ ಇರುವ 7481 ಎಕರೆ 21.08 ಗುಂಟೆ ರೈತರ ಕೃಷಿ ಜಮೀನನ್ನು ವಶಪಡಿಸಿಕೊಂಡು ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯನ್ನು ರೂ.18,133 ಕೋಟಿಗಳ ಅಂದಾಜು ಮೊತ್ತದಲ್ಲಿ ಅನುಷ್ಠಾನಗೊಳಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 18(3)ರಡಿ ರಾಜ್ಯ ಸರ್ಕಾರದ ಆದೇಶದ ಸಂಖ್ಯೆ ನಂ. ನಅಇ 63 ಬಿಎಂಆರ್ 2026 (ಇ) ದಿನಾಂಕ 07.05.2026 ಅನುಮೋದನೆ ನೀಡಲಾಗಿದೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ಮತ್ತು ಕನಕಪುರ ತಾಲ್ಲೂಕುಗಳಲ್ಲಿ ಈಗಾಗಲೇ ರಾಜ್ಯ ಸರ್ಕಾರ ಬಿಡದಿ ಮತ್ತು ಹಾರೋಹಳ್ಳಿಯಲ್ಲಿ ಸಾವಿರಾರು ಎಕರೆ ರೈತರ ಕೃಷಿಭೂಮಿಯನ್ನು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಪ್ರದೇಶ ಮಂಡಳಿಯಿಂದ ವಶಪಡಿಸಿಕೊಂಡು ಕಾರ್ಖಾನೆಗಳನ್ನು ಸ್ಥಾಪಿಸಲು, ಅಭಿವೃದ್ಧಿ ಪಡಿಸಿದ ಕೈಗಾರಿಕಾ ಪ್ರದೇಶವನ್ನು ಹಂಚಿದೆ. ಅಲ್ಲದೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಮಹಾನಗರಕ್ಕೆ ಹೊಂದಿಕೊಂಡಿದ್ದು, ಹಲವಾರು ಉದ್ಯಮಿಗಳು ಖಾಸಗಿ ಕಾರ್ಖಾನೆಗಳನ್ನು ಸ್ಥಾಪಿಸಿದ್ದಾರೆ.


# 743, 2nd Main, 9th Cross, Padmanabha Nagar, Bengaluru - 560 070. Phone : + 91 80 26891444
# 5, Safdarjung Lane, New Delhi - 110 011. Phone : + 91 11 23794499, Fax : 91 11 23010288

ಅಲ್ಲದೆ, ಹಲವಾರು ರಿಯಲ್ ಎಸ್ಟೇಟ್ ಉದ್ಯಮಿಗಳು, ಕರ್ನಾಟಕ ಗೃಹ ಮಂಡಳಿ ಹಾಗೂ ಗೃಹ ನಿರ್ಮಾಣ ಸಹಕಾರ ಸಂಘಗಳು ರೈತರಿಂದ ನೇರವಾಗಿ ಸಾವಿರಾರು ಕೃಷಿಭೂಮಿಯನ್ನು ಖರೀದಿಸಿ, ಅನ್ಯ ಸಂಕ್ರಮಣಗೊಳಿಸಿ, ಲೇಔಟ್ ನಿರ್ಮಿಸಿ ನಿವೇಶನಗಳನ್ನು ಹಂಚಿದ್ದಾರೆ.

ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಸಂಬಂಧಿಸಿದ ಭೂ ಸ್ವಾಧೀನಾಧಿಕಾರಿಗಳು ಹೊರಡಿಸಿರುವ ಅಂತಿಮ ಅಧಿಸೂಚನೆ ಅನುಸಾರ ಸರ್ಕಾರಿ, ಖಾಸಗಿ ಮತ್ತು ಮಾಲೀಕತ್ವದ ಜಮೀನುಗಳ ಗ್ರಾಮವಾರು ವಿವರಗಳು ಈ ಕೆಳಕಂಡಂತೆ ಇರುತ್ತವೆ:

| ಕ್ರ.ಸಂ | ಗ್ರಾಮದ ಹೆಸರು | ಒಟ್ಟು ಸರ್ಕಾರಿ ಭೂಮಿ | ಒಟ್ಟು ಖಾಸಗಿ ಭೂಮಿ | ಭೂಸ್ವಾಧೀನಪಡಿಸಿಕೊಳ್ಳುವ ಒಟ್ಟು ಭೂಮಿ |
|---|---|---|---|---|
| 1 | ಕೆ.ಜಿ.ಗೊಲ್ಲರಪಾಳ್ಯ | 73-20-08 | 241-15-08 | 314-35-00 |
| 2 | ಬೈರಮಂಗಲ | 71-19-00 | 1060-04-04 | 1131-15-04 |
| 3 | ಅರಳಾಳುಸಂದ್ರ | 277-01-00 | 1217-09-08 | 1494-10-08 |
| 4 | ಮಂಡಲಹಳ್ಳಿ | 20-07-00 | 51-27-00 | 71-34-00 |
| 5 | ಕೆಂಪಯ್ಯನಪಾಳ್ಯ | 57-02-00 | 302-13-04 | 359-15-04 |
| 6 | ಕಂಚುಗಾರನಹಳ್ಳಿ, | 05-11-00 | 779-26-08 | 784-37-08 |
| 7 | ಬನಗಿರಿ | 53-19-00 | 660-28-12 | 714-07-12 |
| 8 | ಹೊಸೂರು | 272-38-00 | 2271-36-04 | 2544-34-04 |
| 9 | ವಡೇರಹಳ್ಳಿ | nil | 66-32-00 | 65-32-00 |
| | ಒಟ್ಟು | 830-37-08 | 6650-33-00 | 7481-21-08 |

ಮುಂದುವರೆದು, ಸರ್ಕಾರಿ ದಾಖಲಾತಿಗಳ ಪ್ರಕಾರ ಬಿಡದಿ ಸಮಗ್ರ ಉಪನಗರ ಯೋಜನಗೆ ಹೊರಡಿಸಿರುವ ಅಂತಿಮ ಅಧಿಸೂಚನೆಯಲ್ಲಿ ನಮೂದು ಆಗಿರುವಂತೆ 10,580 ಸಣ್ಣ ರೈತರಾಗಿರುತ್ತಾರೆ. ಈ ಪೈಕಿ ಶೇ. 82ರಷ್ಟು ರೈತರು ಒಂದು ಎಕರೆಗಿಂತ ಕಮ್ಮಿ ಹಿಡುವಳಿ ಹೊಂದಿರುವ ಅತಿ ಸಣ್ಣ ರೈತರು ಆಗಿರುತ್ತಾರೆ.

ಈ ಪೈಕಿ ಸುಮಾರು 2555 ರೈತರು 5 ಗುಂಟೆಗಿಂತ ಕಮ್ಮಿ ಕೃಷಿ ಜಮೀನು ಹೊಂದಿರುತ್ತಾರೆ.

ಈ ಕೆಳಗಿನ ಅಂಕಿ ಅಂಶಗಳು ಈ ಸಮಗ್ರ ಉಪನಗರ ಯೋಜನೆಯಲ್ಲಿ ಸಿಲುಕಿ ನರಳುತ್ತಿರುವ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರ ವಿವರಗಳನ್ನು ನೀಡುತ್ತವೆ:

| ಭೂಹಿಡುವಳಿ ವಿಸ್ತೀರ್ಣ (ಎಕರೆ ಮತ್ತು ಗುಂಟೆಗಳಲ್ಲಿ) | ಭೂಹಿಡುವಳಿದಾರರ ಸಂಖ್ಯೆ |
|---|---|
| (1) 01-05 ಗುಂಟೆ | 2555 |
| (2) 10-20 ಗುಂಟೆ | 1652 |
| (3) 20-40 ಗುಂಟೆ | 2257 |
| (4) 1-2 ಎಕರೆ | 1342 |
| (5) 2-3 ಎಕರೆ | 332 |
| (6) 3-4 ಎಕರೆ | 127 |
| (7) 4-5 ಎಕರೆ | 67 |
| (8) 5-10 ಎಕರೆ | 30 |
| (9) 10-20 ಎಕರೆ | 01 |
| (10) 20-30 ಎಕರೆ | 01 |

ಈ ಭಾಗದ ಸಣ್ಣ ಮತ್ತು ಅತಿ ಸಣ್ಣ ರೈತರು ಸಣ್ಣ- ಪುಟ್ಟ ನೀರಾವರಿ ಬೇಸಾಯವಲ್ಲದೆ, ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ,ಬಾಳೆ ಮತ್ತು ಮಾವುಗಳನ್ನು ಬೆಳೆಯುತ್ತಾರೆ. ಅಲ್ಲದೆ, ಈ ಪ್ರಾಂತ್ಯದ ರೈತರು "ಮಿಶ್ರ ಬೆಳೆ" ಬೆಳೆಯುವ ಪದ್ದತಿಯನ್ನು ರೂಡಿಸಿಕೊಂಡು, ನರ್ಸರಿ, ಅಣಬೆ, ಅಡಕೆ ತಟ್ಟೆ ತಯಾರಿಕೆ ಮುಂತಾದ ಸಣ್ಣ- ಪುಟ್ಟ ಕೃಷಿ ಕೈಗಾರಿಕೆಗಳನ್ನು ಸ್ಥಾಪಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ.

**H.D. DEVE GOWDA**
**Former Prime Minister of India**



ಮುಂದುವರೆದು, ರೈತ ಜೀವನಕ್ಕೆ ಉಪ-ಕಸಬು ಆಗಿರುವ ಹೈನುಗಾರಿಕೆ, ರೇಷ್ಮೆ ಬೆಳೆಗಳನ್ನು ತಮ್ಮ ಜೀವನ ನಿರ್ವಹಣೆಗೆ ಆಶ್ರಯಿಸಿಕೊಂಡಿದ್ದಾರೆ. ಈ ಭೂಸ್ವಾಧೀನದಿಂದ ಸಾವಿರಾರು ಕುಟುಂಬಗಳ ಜೀವನ ನಿರ್ವಹಣೆಗೆ ಧಕ್ಕೆ ಉಂಟಾಗಿ, ರೈತ ಕುಟುಂಬದ ಯುವಕರು ನಿರುದ್ಯೋಗಿಳಾಗಿ ಬೀದಿಪಾಲಾಗುತ್ತಾರೆ.

**ಮಾನ್ಯ ಮುಖ್ಯಮಂತ್ರಿಯವರೇ,**

**ನಿಮಗೆ ತಿಳಿದಿರುವಂತೆ ಒಂದು ಸಾವಿರ ಎಕರೆ ಅಂಗಳವುಳ್ಳ ಮತ್ತು ಹಲವು ದಶಕಗಳಿಂದ ನೀರಾವರಿಗೆ ಆಶ್ರಯವಾಗಿದ್ದ ಭೈರಮಂಗಳ ಕೆರೆಯು ಇಂದು ವೃಷಭಾವತಿ ಕಣಿವೆಯಿಂದ ಬರುವ ತ್ಯಾಜ್ಯದ ನೀರು ಮತ್ತು ಕೈಗಾರಿಕ ಮಾಲಿನ್ಯ ನೀರಿನಿಂದ ತುಂಬಿ ಕೆರೆ ಅಂಗಳ ನೊರೆ ಮತ್ತು ಕಳೆಯಿಂದ ಅವೃತವಾಗಿದೆ. ಇದರಿಂದ ಸುತ್ತು-ಮುತ್ತಲಿನ ಗ್ರಾಮಗಳಲ್ಲಿ ವಾಸಿಸುತ್ತಿರುವ ನಾಗರೀಕರು ಮತ್ತು ಜಾನುವಾರುಗಳ ಮೇಲೆ ಪರಿಸರ ಮಾಲಿನ್ಯ, ಕಲುಷಿತ ನೀರಿನ ವಾಸನೆಯಿಂದ ತೀವ್ರತರವಾದ ಆರೋಗ್ಯ ಸಮಸ್ಯೆ ಉಂಟಾಗಿದೆ.**

**ಅಲ್ಲದೇ ರಾಜ್ಯ ಸರ್ಕಾರ ಸಣ್ಣ ನೀರಾವರಿ ಇಲಾಖೆ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಂದಾಜು ರೂ.300 ಕೋಟಿ ವೆಚ್ಚದಲ್ಲಿ ಈ ಕೆರೆಯನ್ನು ಪುನರ್ ಜೀವನಗೊಳಿಸಲು ಕೈಗೊಂಡಿರುವ ಯೋಜನೆಗಳು ದಶಕಗಳಿಂದ ನೆನೆಗುದಿಗೆ ಬಿದ್ದಿವೆ. ಇಂತಹ ಪರಿಸ್ಥಿತಿಯಲ್ಲಿ ಭೈರಮಂಗಲ ಕೆರೆಯ ಪಕ್ಕದಲ್ಲಿ ಸಮಗ್ರ ಉಪನಗರ ಯೋಜನೆಯನ್ನು ಕೈಗೊಂಡು ಸುತ್ತಮುತ್ತಲಿನ ಪರಿಸರಕ್ಕೆ ಧಕ್ಕೆ ತರುವುದು ಸಾರ್ವಜನಿಕ ದೃಷ್ಠಿಯಲ್ಲಿ ಒಳ್ಳೆಯದಲ್ಲ.**

ಈ ಸಮಗ್ರ ಉಪನಗರ ಯೋಜನಾ ರಚನೆಯಂತೆ, ಈ ಯೋಜನೆಯ ಸುತ್ತ-ಮುತ್ತ ಗ್ರಾಮಗಳಲ್ಲಿ ಈಗಾಗಲೇ ಕೃಷಿ ಭೂಮಿಯನ್ನು ಖರೀದಿಸಲು ಬೆಂಗಳೂರುನಗರ ಮತ್ತು ಸುತ್ತು-ಮುತ್ತಲಿನ ತಾಲ್ಲೂಕಿನ ರಿಯಲ್ ಎಸ್ಟೇಟ್‌ನವರು ಮತ್ತು ಬಿಲ್ಡರ್ಸ್ ಮುಂದಾಗಿದ್ದು, ದೊಡ್ಡ ಮತ್ತು ಸಣ್ಣ-ಪುಟ್ಟ ರೈತರು ಕೃಷಿ ಭೂಮಿಗೆ ಹೆಚ್ಚಿನ ಬೆಲೆ ದೊರೆಯುವುದರಿಂದ ಮಾರಾಟಕ್ಕೆ ಸಿದ್ದರಾಗಿದ್ದಾರೆ. ಈಗಾಗಲೇ ಸಾವಿರಾರು ಎಕರೆ ಕೃಷಿ ಭೂಮಿ ರಿಯಲ್ ಎಸ್ಟೇಟ್ ದಂಧೆಯಲ್ಲಿ ಮಾರಾಟವಾಗಿದೆ. ಇದರಿಂದ ಸಣ್ಣ ಹಿಡುವಳಿದಾರ ರೈತರು ತಮ್ಮ ಜೀವನಾಧರವನ್ನು ಮಾರಾಟ ಮಾಡಿ ಊರು ಬಿಟ್ಟು ಬೀದಿಪಾಲಾಗಿದ್ದಾರೆ.

# 743, 2nd Main, 9th Cross, Padmanabha Nagar, Bengaluru - 560 070. Phone : + 91 80 26891444
# 5, Safdarjung Lane, New Delhi - 110 011. Phone : + 91 11 23794499, Fax : 91 11 23010288

H.D. DEVE GOWDA
Former Prime Minister of India



**ಮಾನ್ಯ ಮುಖ್ಯಮಂತ್ರಿಯವರೇ,**

ರಾಜ್ಯ ಸರ್ಕಾರಕ್ಕೆ ಬಿಡದಿ ಟೌನ್‌ಶಿಪ್ ನಿರ್ಮಾಣ ಪ್ರಸ್ತಾವನೆ ಹೊಸದೇನಲ್ಲ. ಈ ಹಿಂದೆ ಅಂದರೆ 2006-08 ಅವಧಿಯಲ್ಲಿ ಶ್ರೀ ಹೆಚ್.ಡಿ.ಕುಮಾರಸ್ವಾಮಿರವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ಬೆಂಗಳೂರು ನಗರದ ಮೇಲಿನ ಒತ್ತಡ ನಿರ್ವಹಣೆ ಮಾಡುವ ದೂರದೃಷ್ಟಿಯಿಂದ ಮತ್ತು ನಗರ ಮಟ್ಟದಲ್ಲಿ ಹಾದು ಹೋಗುವ ವಾಹನಗಳ ಸಾಂದ್ರತೆಯನ್ನು ತಪ್ಪಿಸಲು ಬೆಂಗಳೂರು ನಗರಕ್ಕೆ ಹೊಂದಿಕೊಂಡಂತೆ ಐದು (5) ಉಪನಗರಗಳನ್ನು ನಿರ್ಮಿಸಲು ತೀರ್ಮಾನಿಸಲಾಗಿತ್ತು.

(1) ನಂದಗುಡಿ – ಹೊಸಕೋಟೆ ತಾಲ್ಲೂಕು (2) ಕಸಬಾ – ರಾಮನಗರ ತಾಲ್ಲೂಕು

(2) ಬಿಡದಿ – ರಾಮನಗರ ತಾಲ್ಲೂಕು (4) ಸೋಲೂರು – ರಾಮನಗರ ತಾಲ್ಲೂಕು

(5) ಸಾತನೂರು – ಕನಕಪುರ ತಾಲ್ಲೂಕು

ತದನಂತರ, ಬಿಡದಿ ಟೌನ್‌ಶಿಪ್ ಅನ್ನು ಪೈಲೆಟ್ ಪ್ರಾಜೆಕ್ಟ್ ಆಗಿ ಕೈಗೆತ್ತಿಕೊಂಡು ನವದೆಹಲಿಯ ಡಿಎಲ್‌ಎಫ್ ಸಂಸ್ಥೆಯಿಂದ 9684 ಎಕರೆ ಜಮೀನಿನಲ್ಲಿ ಉಪನಗರ ನಿರ್ಮಿಸಲು ನಿರ್ಧರಿಸಲಾಯಿತು.

ಆದರೆ, ರೈತರ ವಿರೋಧ ಮತ್ತು ಇಂತಹ ಬೃಹತ್ ಗಾತ್ರದ ಯೋಜನೆಯಿಂದ ಸ್ಥಳೀಯವಾಗಿ ಉಂಟಾಗುವ ಪರಿಣಾಮಗಳನ್ನು ಪರಿಗಣಿಸಿ, ಈ ಯೋಜನೆಯನ್ನು ಕೈಬಿಡಲಾಯಿತು. ಆದರೆ, ಈ ಯೋಜನೆಗೆ ಯಾವುದೇ ಭೂಸ್ವಾಧೀನ ಪ್ರಕ್ರಿಯೆ ನೆಡೆಸಿರುವುದಿಲ್ಲ.

**ತದನಂತರ, 2008-10ರ ಅವಧಿಯಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು 2009ನೇ ಇಸವಿಯಲ್ಲಿ ಡಿಎಲ್‌ಎಫ್ ಸಂಸ್ಥೆ ಠೇವಣಿ ಇಟ್ಟಿದ್ದ ರೂ. 400 ಕೋಟಿ ಹಣವನ್ನು ಬಿಎಂಆರ್‌ಡಿಎ ಸಂಸ್ಥೆ ಮುಖೇನ ಬಡ್ಡಿ ಸಮೇತ ವಾಪಸ್ಸು ಮಾಡಿ ಈ ಯೋಜನೆಯನ್ನು ಕೈಬಿಡಲಾಗಿದೆ.**

**ಮುಂದುವರೆದು, 2006-2008ರ ಅವಧಿಯಲ್ಲಿ ಶ್ರೀ.ಹೆಚ್.ಡಿ.ಕುಮಾರಸ್ವಾಮಿ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಬಿಡದಿ ಟೌನ್‌ಶಿಪ್ ನಿರ್ಮಾಣದ ತೀರ್ಮಾನದಲ್ಲಿ ಅವ್ಯವಹಾರ ನಡೆದಿದೆ ಎನ್ನುವ ಆರೋಪದ ಹಿನ್ನೆಲೆಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ಶ್ರೀ ಹೆಚ್.ಕೆ ಪಾಟೀಲ್ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಪಕ್ಷವೇ ಒಂದು ಸತ್ಯಶೋಧನಾ ಸಮಿತಿಯನ್ನು ರಚಿಸಲಾಗಿದೆ ಎಂದು ವರದಿಯಾಗಿದೆ. ಆದರೆ ಶ್ರೀ ಹೆಚ್.ಕೆ ಪಾಟೀಲರ ನೇತೃತ್ವದ ಈ ಸಮಿತಿಯ**

# 743, 2nd Main, 9th Cross, Padmanabha Nagar, Bengaluru - 560 070. Phone : + 91 80 26891444
# 5, Safdarjung Lane, New Delhi - 110 011. Phone : + 91 11 23794499, Fax : 91 11 23010288

सत्यमेव जयते

H.D. DEVE GOWDA
Former Prime Minister of India



ವರದಿಯಲ್ಲಿರುವ ಮುಖ್ಯಾಂಶಗಳು ಮತ್ತು ಸತ್ಯಾಂಶಗಳು ಯಾವುವು ಎಂಬುದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಅಲ್ಲದೇ, ರಾಜ್ಯ ಸರ್ಕಾರ ಇಂತಹ ಯೋಜನೆಗಳ ರೂಪಿಸುವಿಕೆ, ಸಾರ್ವಜನಿಕ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸುವಿಕೆ ಹಾಗೂ ಕಾರ್ಯತಂತ್ರದ ಬಗ್ಗೆ ಯಾವುದಾದರು ಉತ್ತಮ ಸಲಹೆಗಳು ಮತ್ತು ಮಾರ್ಗ ಸೂಚಿಗಳು ಅಡಕವಾಗಿದ್ದರೆ, ಅಂತಹ ಶಿಫ್ಪಾರಸ್ಸುಗಳನ್ನು ಬಹಿರಂಗಗೊಳಿಸುವುದು ಅತ್ಯವಶ್ಯ ಹಾಗೂ ಈ ವರದಿಯನ್ನು ಆಧರಿಸಿ ಪ್ರದೇಶ ಕಾಂಗ್ರೆಸ್ ಪಕ್ಷ ರಾಜ್ಯ ಸರ್ಕಾರಕ್ಕೆ ಮುಂದಿನ ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿರುವ ಅಂಶಗಳು ಯಾವುವು ಎಂಬುದನ್ನು ಸಾರ್ವಜನಿಕವಾಗಿ ಬಹಿರಂಗ ಪಡಿಸಲಾಗಿದೆಯೇನು? ಹಾಗಿದ್ದಲ್ಲಿ, ಈ ವಿವರಗಳನ್ನು ನನಗೆ ಒದಗಿಸಬಹುದೇ? ದಯವಿಟ್ಟು ಈ ಬಗ್ಗೆ ನೀವು ಸಂಪೂರ್ಣ ಮಾಹಿತಿ ನೀಡಬೇಕೆಂದು ಕೋರುತ್ತೇನೆ.

ಮುಂದುವರೆದು, ಕಳೆದ ಮೂರು ದಶಕಗಳಿಂದ ಬೆಂಗಳೂರಿನ ನಿವೇಶನ ರಹಿತ ನಾಗರೀಕರಿಗೆ ನಿವೇಶನ ಸೌಲಭ್ಯ ಒದಗಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಡಾ.ಶಿವರಾಮ ಕಾರಂತ ಲೇಔಟ್, ಮತ್ತು ನಾಡಪ್ರಭು ಕೆಂಪೇಗೌಡ ಲೇಔಟ್, ಮುಂತಾದವುಗಳು ರೂಪಿಸಿ ನಿವೇಶನ ರಚಿಸಿ ಹಂಚಿಕೆ ಮಾಡಿರುವುದು ಸರಿಯಷ್ಟೇ. ಇತ್ತೀಚಿನ ವರದಿಗಳ ಪ್ರಕಾರ ಮೇಲೆ ತಿಳಿಸಿದ ಲೇಔಟ್‌ಗಳಲ್ಲಿ ಸಾವಿರಾರು ಅಭಿವೃದ್ದಿಪಡಿಸಿದ ನಿವೇಶನಗಳು ನಾಗರೀಕರಿಂದ ಬೇಡಿಕೆಯಿಲ್ಲದೇ ಖಾಲಿ ಬಿದ್ದಿರುವುದು ನಿಜವಲ್ಲವೇ ಮತ್ತು ಈ ಅಂಶಗಳು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇದಲ್ಲದೇ, ಹೊಸೂರು ರಸ್ತೆ, ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ, ಮೈಸೂರು ರಸ್ತೆಗೆ ಹಾದು ಹೋಗುವ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್-2 (PRR-2) ರಸ್ತೆಗೆ ಹೊಂದಿಕೊಂಡಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ಮಹಾನಗರ ಸಾರ್ವಜನಿಕರಿಗೆ ವಸತಿ ಸೌಲಭ್ಯಗಳನ್ನು ಕಲ್ಪಿಸಲು 6 ಬಡಾವಣೆಗಳನ್ನು ಒಟ್ಟು 6217 ಎಕರೆ 3.88 ಗುಂಟೆ ವಿಸ್ತೀರ್ಣ ಪ್ರದೇಶದಲ್ಲಿ ರಚಿಸುವ ಪ್ರಸ್ತಾವನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿರುವುದು ಸರಿಯಷ್ಟೇ.

# 743, 2nd Main, 9th Cross, Padmanabha Nagar, Bengaluru - 560 070. Phone : + 91 80 26891444
# 5, Safdarjung Lane, New Delhi - 110 011. Phone : + 91 11 23794499, Fax : 91 11 23010288

सत्यमेव जयते

# H.D. DEVE GOWDA

Former Prime Minister of India



ರಾಜ್ಯ ಸರ್ಕಾರದಿಂದ ದಿನಾಂಕ:-25/07/2025ರಂದು ಅನುಮೋದನೆಗೊಂಡ ಸರ್ಕಾರಿ ಆದೇಶದಂತೆ ಈ ಕೆಳಕಂಡ 6 ಬಡವಣೆಗಳನ್ನು ರಚಿಸಲು ಆದೇಶಿಸಲಾಗಿದೆ.

| ಕ್ರ.ಸಂ. | ಬಡಾವಣೆಯ ವಿವರ | ವ್ಯಾಪ್ತಿ (ಎಕರೆ-ಗುಂಟೆ) | ಗ್ರಾಮದ ಹೆಸರು |
|---|---|---|---|
| 1 | Layout -1 | 84-23 | ಮಾರಗೊಂಡನಹಳ್ಳಿ |
| 2 | Layout -2 | 516-21.5 | ಹುಲಿಮಂಗಲ,ಬೆಟ್ಟದಾಸನಪುರ,ಎಸ್ ಬಿಂಗೀಪುರ |
| 3 | Layout -3 | 216-20 | ಹುಲ್ಲಹಳ್ಳಿ |
| 4 | Layout -4 | 510-0.08 | ಬೇಗೂರು, ಹೊಮ್ಮದೇವನಹಳ್ಳಿ ಕಮ್ಮನಹಳ್ಳಿ, ಮೈಲೂಸಂದ್ರ, ಎಲ್ಲೇನಹಳ್ಳಿ ಹುಲ್ಲಳ್ಳಿ |
| 5 | Layout -5 | 4206-29.3 | ಬಿ.ಎಂ.ಕಾವಲ್, ಕಗ್ಗಲಿಪುರ,ಯು.ಎಂ.ಕಾವಲ್ ಅಗರ, ಗುಳಕಮಲೈ, ಒ.ಬಿ.ಚೂಡನಹಳ್ಳಿ, ಉತ್ತರಿ |
| 6 | Layout -6 | 652-30 | ಬಿ.ಎಂ ಕಾವಲ್,ದೇವಗಿರಿ, ಗಂಗಸಂದ್ರ, ಗುಡಿಮಾವು |
| | ಒಟ್ಟು | 6217-3.88 | |

ಈ ಬಡಾವಣೆಗಳನ್ನು ಸಾರ್ವಜನಿಕರ ಸಹಭಾಗಿತ್ವದ ಮಾದರಿಯಲ್ಲಿ ನಿರ್ಮಿಸಲು ಪ್ರಸ್ತಾಪಿಸಿದ್ದು, ಈ ಬಡಾವಣೆಗಳಲ್ಲಿ ಬಿ.ಡಿ.ಎ ಸ್ವಾಧೀನಕ್ಕೆ ಬರುವ ಸಾವಿರಾರು ನಿವೇಶನಗಳನ್ನು ನಾಗರೀಕರಿಗೆ ಹಂಚಬೇಕಾಗುತ್ತದೆ. ಮೇಲೆ ತಿಳಿಸಿದಂತೆ ಬಿ.ಡಿ.ಎ ವತಿಯಿಂದ ಮೇಲೆ ಈಗಾಗಲೇ ರಚಿಸಲಾಗಿರುವ ಬಡಾವಣೆಗಳಲ್ಲಿ ಸಾವಿರಾರು ನಿವೇಶನಗಳು ಬೇಡಿಕೆ ಇಲ್ಲದೆ ಖಾಲಿ ಇರುವ ಹಿನ್ನೆಲೆಯಲ್ಲಿ ಮೇಲಿನ 6 ಬಡಾವಣೆಗಳ ರಚಿಸಲು 6217 ಎಕರೆ 3.88 ಗುಂಟೆ ಕ್ಷೇತ್ರದ ರೈತರ ಫಲವತ್ತಾದ ಮತ್ತು ಬೆಲೆಬಾಳುವ ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳುವ ಅವಶ್ಯಕತೆ ಮತ್ತು ಔಚಿತ್ಯವೇನು? ದಯವಿಟ್ಟು ಸಾರ್ವಜನಿಕರಿಗೆ ಮನದಟ್ಟು ಮಾಡಿಕೊಡುವಿರಾ?

ಇಂತಹ ಸನ್ನಿವೇಶಗಳಲ್ಲಿ ರಾಜ್ಯ ಸರ್ಕಾರ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯನ್ನು ಕೈಗೆತ್ತಿಕೊಂಡು ಬಡಾವಣೆ ರಚಿಸುವುದು ಸರ್ಕಾರದ ದುಂದು ಮತ್ತು ಅನುಪಯುಕ್ತ ವೆಚ್ಚಕ್ಕೆ ದಾರಿ ಮಾಡಿಕೊಡುವುದಿಲ್ಲವೇ?.

# 743, 2nd Main, 9th Cross, Padmanabha Nagar, Bengaluru - 560 070. Phone : + 91 80 26891444
# 5, Safdarjung Lane, New Delhi - 110 011. Phone : + 91 11 23794499, Fax : 91 11 23010288

सत्यमेव जयते

# H.D. DEVE GOWDA
Former Prime Minister of India



ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಸಂಬಂಧಿಸಿದಂತೆ ಭಾದಿತ ರೈತರು ನಡೆಸುತ್ತಿರುವ ಹೋರಾಟವನ್ನು ಅರಿತ ನಿಮ್ಮ ಸಚಿವ ಸಂಪುಟದ ಹಿರಿಯ ಸಹುದ್ಯೋಗಿಗಳಾದ ಮಾನ್ಯ ಶ್ರೀ ಸತೀಶ್ ಜಾರಕಿಹೊಳಿ, ಮಾನ್ಯ ಶ್ರೀ ಪ್ರಿಯಾಂಕ್ ಖರ್ಗೆ ಮತ್ತು ಮಾನ್ಯ ಶ್ರೀ ಹೆಚ್.ಕೆ ಪಾಟೀಲ್ ರವರು ರಾಜ್ಯ ಸರ್ಕಾರ ಹೀಗಾಗಲೇ ಬಿ.ಡಿ.ಎ ವತಿಯಿಂದ ನಿರ್ಮಿಸಿರುವ ಇತ್ತೀಚಿನ ಬಡಾವಣೆಗಳಲ್ಲಿ ಹಂಚಿಕೆಯಾಗದೆ ಉಳಿದಿರುವ ಸಾವಿರಾರು ನಿವೇಶನಗಳು ಖಾಲಿ ಇದ್ದು ಗ್ರೇಟರ್ ಬೆಂಗಳೂರು ಸಮಗ್ರ ಉಪ ನಗರ ಯೋಜನೆಯ ಅನುಷ್ಠಾನದ ಬಗ್ಗೆ ಸಾಧಕ ಬಾಧಕಗಳನ್ನು ಸಚಿವ ಸಂಪುಟದಲ್ಲೂ ಕೂಲಂಕಷವಾಗಿ ಚರ್ಚಿಸುವುದಾಗಿ ಬಹಿರಂಗವಾಗಿ ಹೇಳಿಕೆ ನೀಡಿದ್ದಾರೆ. ನಿಮ್ಮ ಹಿರಿಯ ಸಹುದ್ಯೋಗಿಗಳ ಹೇಳಿಕೆ ನಿಜವಾಗಿಯೂ ಪ್ರಬುದ್ದತೆ ಮತ್ತು ನ್ಯಾಯಸಮ್ಮತದಿಂದ ಕೂಡಿದೆ. ಆದ್ದರಿಂದ ಈ ಯೋಜನೆ ಅನುಷ್ಠಾನವನ್ನು ರಾಜ್ಯ ಸರ್ಕಾರ ಪುನರ್ ಪರಿಶೀಲಿಸಿ, ಕೈ ಬಿಡುವುದು ಅತ್ಯವಶ್ಯಕವಾಗಿದೆ.

ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯಂತಹ ಬೃಹತ್ ಗಾತ್ರದ ಯೋಜನೆಯನ್ನು ಅನುಷ್ಠಾನಗೊಳಿಸುವಮುನ್ನ ಮತ್ತು ಕರಡು ವರದಿ ಯೋಜನೆಯನ್ನು ತಯಾರಿಸುವದೊಂದಿಗೆ, ಈ ಯೋಜನೆಯಿಂದ ಈ ಪ್ರಾಂತ್ಯದ ಸುತ್ತಮುತ್ತಲು ಉಂಟಾಗುವ ಸಾಮಾಜಿಕ ಪರಿಣಾಮಗಳ ಅಧ್ಯಯನ ಹಾಗೂ ಪರಿಸರದ ಪರಿಣಾಮಗಳ ಅಧ್ಯಯನಗಳನ್ನು ಕೇಂದ್ರ ಸರ್ಕಾರದ ಭೂಸ್ವಾಧೀನ ಕಾಯ್ದೆ – 2013 ಪ್ರಕಾರ ಅತಿ ಅವಶ್ಯವಾಗಿ ಮತ್ತು ಕಡ್ಡಾಯವಾಗಿ ನೆಡೆಸಬೇಕಾಗಿದೆ.

ಮುಂದುವರೆದು, ಗ್ರೇಟರ್ ಬೆಂಗಳೂರು ಬಿಡದಿ ಸಮಗ್ರ ಉಪನಗರ ಯೋಜನೆಗೆ ಮಾಸ್ಟರ್ ಪ್ಲಾನ್‌ನ ಒಳಗೊಂಡಂತೆ ವಿಸ್ತೃತ ಯೋಜನೆ ತಯಾರಿಸಲು 26 ಕೋಟಿ ರೂ ವೆಚ್ಚದಲ್ಲಿ ಯೋಜನೆ ಸಲಹೆಗಾರರನ್ನು ನೇಮಿಸುವುದಾಗಿ ತಾವು ಹೇಳಿಕೆ ನೀಡಿದ್ದೀರಿ.

ಅಲ್ಲದೇ, ಸ್ಥಳೀಯ ರೈತರ ಮತ್ತು ಭೂಮಾಲೀಕರ ತಕರಾರು ಮತ್ತು ವಿರೋಧದ ನಡುವೆಯೂ ಸಹ ಜನಾಭಿಪ್ರಾಯವನ್ನು ತಿರಸ್ಕರಿಸಿ, ಹಾಗೂ ರೈತರು ಸಲ್ಲಿಸಿದ 4500 ತಕರಾರು ಅರ್ಜಿಗಳನ್ನು ಆಲಿಸಿ, ಇತ್ಯರ್ಥಗೊಳಿಸದೆ ಈ ಸಮಗ್ರ ಉಪನಗರ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆ ಅಂತಿಮ ಅಧಿಸೂಚನೆಯನ್ನು ರಾಜ್ಯ ಸರ್ಕಾರ ಹೊರಡಿಸಿರುವುದು ನ್ಯಾಯ ಸಮ್ಮತವೇ?

ಬೆಂಗಳೂರು – ಮೈಸೂರು ಎಕ್ಸ್‌ಪ್ರೆಸ್ ವೇ ಅನುಷ್ಠಾನದಲ್ಲಿ ಬೆಂಗಳೂರಿನಿಂದ ಶ್ರೀರಂಗಪಟ್ಟಣದ ಎಕ್ಸ್‌ಪ್ರೆಸ್ ವೇಯಾ ಎರಡು ಬದಿಯಲ್ಲಿ ಬಿಡದಿಯು ಸೇರಿದಂತೆ 5 ಉಪನಗರಗಳನ್ನು ನಿರ್ಮಿಸಲು

H.D. DEVE GOWDA
Former Prime Minister of India



ಉದ್ದೇಶಿಸಲಾಗಿಲ್ಲವೆ. ಹಾಗಿದ್ದಲ್ಲಿ, ರಾಜ್ಯ ಸರ್ಕಾರ ಈ ಬಿಡದಿ ಉಪನಗರವನ್ನು ನೈಸ್ ಸಂಸ್ಥೆಯಿಂದ ನಿರ್ಮಿಸಲು ಕೈಗೊಂಡಿರುವ ಕ್ರಮಗಳು ಯಾವುವು?

**ಮುಂದುವರೆದು, ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯ ಅನುಷ್ಠಾನಕ್ಕಾಗಿ ಪಡೆಯಲಿರುವ ಒಟ್ಟು ರೂ.12,511 ಕೋಟಿಗಳ ಸಾಲದ ಪೈಕಿ ರೂ.7,500 ಕೋಟಿಗಳಿಗೆ ರಾಜ್ಯ ಸರ್ಕಾರದ ಖಾತ್ರಿ ನೀಡುವುದಾಗಿ ಮತ್ತು ಉಳಿಕೆ ಹಣವನ್ನು ಬಿಎಂಆರ್‌ಡಿಎ ಸ್ವತ್ತಿನ ಅಡಮಾನದ ಮೂಲಕ ಹಣಕಾಸು ಸಂಸ್ಥೆ ಮತ್ತು ಬ್ಯಾಂಕ್‌ಗಳಿಂದ ಸಾಲ ಪಡೆಯಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.**

**ಅಲ್ಲದೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಈ ಉಪನಗರ ಯೋಜನೆಗೆ ರೂ.3,000 ಕೋಟಿಗಳನ್ನು ಈಕ್ವಿಟಿ ರೂಪದಲ್ಲಿ ಪಡೆಯಲು ಸಹ ಅನುಮತಿ ನೀಡಲಾಗಿದೆ.**

ರಾಜ್ಯ ಸರ್ಕಾರ ಈಗಾಗಲೇ ಪಂಚ ಗ್ಯಾರಂಟಿಗಳ ಅನುಷ್ಠಾನ ಮತ್ತು ಇತರೆ ಸರ್ಕಾರಿ ಬಾಬುಗಳಿಗೆ ಇಂದಿನವರೆಗೆ ರೂ.8.14 ಲಕ್ಷ ಕೋಟಿಗಳನ್ನು (**Off Budget Borrowing** ಒಳಗೊಂಡಂತೆ) ಸಾಲ ಪಡೆದಿದೆ. ಇಂತಹ ಕ್ಲಿಷ್ಟ ಸಮಯದಲ್ಲಿ ಸಚಿವರಾಗಿ ದಶಕಗಳ ಕಾಲ ಕಾರ್ಯನಿರ್ವಹಿಸಿರುವ ತಾವು ಇಂತಹ ಉಪನಗರ ಯೋಜನೆಗಳನ್ನು ಸಮರ್ಥಿಸಿಕೊಳ್ಳುತ್ತೀರಾ?

ಈ ಕೆಳಕಂಡ ಮಹತ್ವದ ಕಾರಣಗಳಿಂದ ರಾಜ್ಯ ಸರ್ಕಾರ ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿಯ 08 ಗ್ರಾಮಗಳಲ್ಲಿ ಮತ್ತು ಹಾರೋಹಳ್ಳಿ ಹೋಬಳಿಯ ಒಂದು ಗ್ರಾಮದಲ್ಲಿ 7481 ಎಕರೆ ಮತ್ತು 21.8ಗುಂಟೆ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯನ್ನು ಕೂಡಲೇ ಕೈಬಿಟ್ಟು ಈ ಭಾಗದ ರೈತರು ಮತ್ತು ಗ್ರಾಮಸ್ಥರು ನೆಮ್ಮದಿ ಬದುಕು ಸಾಗಿಸಲು ಅನುವು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**(1) ಗ್ರೇಟರ್ ಬೆಂಗಳೂರು ಉಪನಗರ ಯೋಜನೆ ಅನುಷ್ಠಾನಕ್ಕೆ ಭೂಸ್ವಾಧೀನ ಒಳಗಾಗುತ್ತಿರುವ 09 ಗ್ರಾಮಗಳಲ್ಲಿನ ಶೇ. 82ರಷ್ಟು ರೈತರು ಸಣ್ಣ ಮತ್ತು ಅತಿ ಸಣ್ಣ ರೈತರು. ಈ ರೈತರಿಗೆ ಕೃಷಿಯ ಜೀವನೋದ್ಧಾರ ಹಾಗೂ ರೈತರು ತಮ್ಮ ಕುಟುಂಬ ಆಧಾರಕ್ಕೆ ಉಪ-ಕಸುಬುಗಳಾದ, ಹೈನುಗಾರಿಕೆ, ತೋಟಗಾರಿಕೆ ರೇಷ್ಮೆ ಮುಂತಾದವುಗಳಿಗೆ ಅವಲಂಬಿತರಾಗಿದ್ದು, ಕೃಷಿ ಭೂಮಿಗಳ ಭೂಸ್ವಾಧೀನದಿಂದ ನಿರಾಶ್ರಿತರಾಗುತ್ತಾರೆ. ಅಲ್ಲದೇ, ಅಡಿಕೆ ತಟ್ಟೆ ತಯಾರಿಕೆ, ನರ್ಸರಿ, ಅಣಬೆ ಉತ್ಪಾದನೆ ಮುಂತಾದ ಸಣ್ಣ**

# 743, 2nd Main, 9th Cross, Padmanabha Nagar, Bengaluru - 560 070. Phone : + 91 80 26891444
# 5, Safdarjung Lane, New Delhi - 110 011. Phone : + 91 11 23794499, Fax : 91 11 23010288

ಪ್ರಮಾಣದ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ. ಇಂತಹ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದರಿಂದ ರೈತರು ಮತ್ತು ಗ್ರಾಮಸ್ಥರು ಬೀದಿ ಪಾಲಾಗುತ್ತಾರೆ.

(2) ಈ ಗ್ರಾಮಗಳಲ್ಲಿ ಪ್ರತಿ ದಿನ ಸರಾಸರಿ 50 ಸಾವಿರ ಲೀಟರ್‌ಗಳಷ್ಟು ಹಾಲನ್ನು ಉತ್ಪಾದಿಸುತ್ತಿದ್ದು, ಪ್ರತಿ ತಿಂಗಳು 6-7 ಲಕ್ಷ ಲೀಟರ್ ಹಾಲನ್ನು ಬೆಂಗಳೂರು ಡೈರಿಗೆ ಹಾಕಿ ತಿಂಗಳಿಗೆ ಸರಿಸುಮಾರು 1 ಕೋಟಿ ರೂ.ಗಳನ್ನು ಸಂಪಾದನೆ ಮಾಡುತ್ತಾರೆ. ಆದ್ದರಿಂದ, ಈ ಹೈನು ಉದ್ಯಮಕ್ಕೆ ಸಂಪೂರ್ಣ ಧಕ್ಕೆ ಆಗುತ್ತದೆ. ಅಲ್ಲದೇ, ಈ ಡೈರಿ ಉದ್ಯಮದಲ್ಲಿ ಬಹುತೇಕ ಮಹಿಳೆಯರೇ ಸದಸ್ಯರಾಗಿರುತ್ತಾರೆ.

(3) ಕೇಂದ್ರ ಸರ್ಕಾರದ ಭೂಸ್ವಾಧೀನ ಕಾಯ್ದೆ-2013ರ ಪ್ರಕಾರ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯಂತಹ ಬೃಹತ್ ಯೋಜನೆಗೆ ಸಾಮಾಜಿಕ ಪರಿಣಾಮ ಸಮೀಕ್ಷೆ ಹಾಗೂ ಪರಿಸರ ಪರಿಣಾಮ ಸಮೀಕ್ಷೆಗಳು ಅತ್ಯವಶ್ಯಕ. ಇದರಿಂದ ರೈತರ ಮತ್ತು ಗ್ರಾಮಸ್ಥರ ಜನಜೀವನಕ್ಕೆ ಸಂಭವಿಸುವ ದಕ್ಕೆಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಅರಿವು ಉಂಟಾಗುತ್ತದೆ.

(4) ಈ ಸಮೀಕ್ಷೆಗಳಿಂದ ಈ ಪ್ರದೇಶದಲ್ಲಿ ಬೆಳೆದಿರುವ 2 ಲಕ್ಷ ಮರಗಳನ್ನು ಒಂದು ವೇಳೆ ಕಡೆದು ಹಾಕಿದರೆ, ಈ ಪ್ರಾಂತ್ಯ ಮತ್ತು ಬೆಂಗಳೂರು ನಗರದ ಮೇಲೆ ಉಂಟಾಗುವ ದುಷ್ಪರಿಣಾಮದ ಅಧ್ಯಯನ ಇರುತ್ತದೆ. ಅಲ್ಲದೆ, ಭೂಸ್ವಾಧೀನದಿಂದ ನೊಂದವರ ಪುನರ್ವಸತಿ ಬಗ್ಗೆ ರಾಜ್ಯ ಸರ್ಕಾರ ಯಾವುದೇ ಕಾಳಜಿ ವಹಿಸಿರುವುದಿಲ್ಲ. ಇಂತಹ ದುಷ್ಪರಿಣಾಮಗಳನ್ನು ಮುಚ್ಚಿಡಲು ರಾಜ್ಯ ಸರ್ಕಾರ ತನ್ನ ದಿನಾಂಕ 12.03.2025 ಆದೇಶದಲ್ಲಿ ಸಾಮಾಜಿಕ ಅಧ್ಯಯನಕ್ಕೆ ವಿನಾಯಿತಿ ನೀಡಿರುವುದು ಅತ್ಯಂತ ಅಸಮಾದಾನಕರ ಮತ್ತು ವಿಷಾದನೀಯ.

(5) ರಾಜ್ಯ ಸರ್ಕಾರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ರಚಿತವಾಗಿರುವ ಡಾ. ಶಿವರಾಮಕಾರಂತ ಬಡಾವಣೆ ಮತ್ತು ನಾಡಪ್ರಭು ಕೆಂಪೇಗೌಡ ಬಡಾವಣೆಗಳಲ್ಲಿ ನಾಗರೀಕರಿಗೆ ಹಂಚಿಕೆಯಾಗದೆ ಸಾವಿರಾರು ನಿವೇಶನಗಳು ಖಾಲಿ ಬಿದ್ದಿವೆ. ಈ ಮಧ್ಯೆ ರಾಜ್ಯ ಸರ್ಕಾರ ಬಿ.ಡಿ.ಎ ವತಿಯಿಂದ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್-2 (PRR-2) ರಸ್ತೆಗೆ ಹೊಂದಿಕೊಂಡಂತೆ 6.217 ಎಕರೆ ಪ್ರದೇಶದಲ್ಲಿ 6 ಬಡಾವಣೆಗಳನ್ನು ನಿರ್ಮಿಸಲು ಉದ್ದೇಶಿಸಿರುವುದರಿಂದ ಈ ಯೋಜನೆ ಅವಶ್ಯಕತೆ ಇರುವುದಿಲ್ಲ.

# 743, 2nd Main, 9th Cross, Padmanabha Nagar, Bengaluru - 560 070. Phone : + 91 80 26891444
# 5, Safdarjung Lane, New Delhi - 110 011. Phone : + 91 11 23794499, Fax : 91 11 23010288

H.D. DEVE GOWDA
Former Prime Minister of India



**(6)** ರಾಜ್ಯ ಸರ್ಕಾರ ಈಗಾಗಲೇ ತನ್ನ ಸಾಮಾಜಿಕ ಯೋಜನೆಗಳ ಅನುಷ್ಠಾನ ಮತ್ತು ಇತರೆ ಸರ್ಕಾರಿ ಬಾಬುಗಳಿಗೆ 8.14 ಲಕ್ಷ ಕೋಟಿ ರೂಪಾಯಿ ರೂಗಳನ್ನು ಸಾಲ ಪಡೆದಿರುತ್ತದೆ. ಅಲ್ಲದೆ, ಇಂತಹ ಕಠಿಣ ಪರಿಸ್ಥಿತಿ ಮತ್ತು ಆರ್ಥಿಕ ಸಂಕಷ್ಟದಲ್ಲಿ ರಾಜ್ಯ ಸರ್ಕಾರ ಇಂತಹ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಸಾಧುವಲ್ಲ ಮತ್ತು ಅವಶ್ಯಕವಲ್ಲ.

ಈ ಮೇಲಿನ ಎಲ್ಲಾ ಕಾರಣಗಳಿಂದ ಮತ್ತು ಸ್ಪಷ್ಟ ಪಡಿಸಿದ ಅಂಶಗಳಿಂದ ರಾಜ್ಯ ಸರ್ಕಾರ ಕೈಗೊಂಡಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪ-ನಗರ ಯೋಜನೆಯನ್ನು ಕೂಡಲೇ ಕೈಬಿಡಬೇಕೆಂದು ಒತ್ತಾಯಿಸುತ್ತೇನೆ

ಒಂದು ವೇಳೆ ರಾಜ್ಯ ಸರ್ಕಾರ ನನ್ನ ಈ ಮನವಿಯನ್ನು ತಿರಸ್ಕರಿಸಿದರೆ. ಈಗಾಗಲೇ ನಿರಂತರ ಹೋರಾಟ ಮತ್ತು ಧರಣಿಯಲ್ಲಿ ಇರುವ ರೈತರನ್ನು ಬೆಂಬಲಿಸಿ, ನಮ್ಮ ಜನತಾದಳ (ಜಾತ್ಯಾತೀತ) ಪಕ್ಷದ ವತಿಯಿಂದ ರಾಜ್ಯ ಸರ್ಕಾರದ ವಿರುದ್ಧ ಹೋರಾಟ ನಡೆಸಲಾಗುವುದು ಎಂಬುದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಮುಂದುವರೆದು, ನನ್ನ 7 ದಶಕಗಳ ಸಾರ್ವಜನಿಕ ಜೀವನದಲ್ಲಿ ರಾಜ್ಯ ಮತ್ತು ದೇಶದ ರೈತರ ಹಿತಕ್ಕೆ ಶ್ರಮಿಸುತ್ತಿದ್ದೇನೆ ಹಾಗೂ ಅಧಿಕಾರ ತ್ಯಾಗ ಮಾಡಿದ್ದೇನೆ. ರಾಜ್ಯ ಸರ್ಕಾರ ನನ್ನ ಮನವಿಯನ್ನು ತಿರಸ್ಕರಿಸಿದರೆ, ಹಾಗೂ ನನ್ನ ಈ ಕೂಗಿಗೆ ಮನಕೊಡದೆ ಇದ್ದರೆ, ವಿಧಾನಸೌಧದ ಆವರಣದಲ್ಲಿನ ಗಾಂಧೀಜಿ ಪ್ರತಿಮೆ ಮುಂದೆ ಕುಳಿತು ಸತ್ಯಾಗ್ರಹ ನಡೆಸುತ್ತೇನೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಹೆಚ್.ಡಿ ದೇವೇಗೌಡ)

ಶ್ರೀ ಡಿ.ಕೆ.ಶಿವಕುಮಾರ್ ರವರು,
ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,
ವಿಧಾನಸೌಧ,
ಬೆಂಗಳೂರು-560001.

# 743, 2nd Main, 9th Cross, Padmanabha Nagar, Bengaluru - 560 070. Phone : + 91 80 26891444
# 5, Safdarjung Lane, New Delhi - 110 011. Phone : + 91 11 23794499, Fax : 91 11 23010288